OCTOBER 01, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಪದೇ ಪದೇ ಪ್ರವಾಹಕ್ಕೀಡಾಗುವ ಗ್ರಾಮಸ್ಥರ ಸ್ಥಳಾಂತರ ಹಾಗೂ ಪುನರ್ವಸತಿಗೆ, ರಾಜ್ಯ ಸರ್ಕಾರದಿಂದ, ಶಾಶ್ವತ ಯೋಜನೆ.**
- **ದೊಡ್ಡಬಳ್ಳಾಪುರದಲ್ಲಿ, 'ನಾನೂ ವಿಜ್ಞಾನಿ' ಟೆಲಿಸ್ಕೋಪ್ ರಚನಾ ಕಮ್ಮಟ, ಇಂದಿನಿಂದ ಆರಂಭ.**
- **ಆರ್.ಎಸ್.ಎಸ್. ಶತಮಾನೋತ್ಸವ; ರಾಜ್ಯದ ವಿವಿಧೆಡೆ ವಿಶೇಷ ಕಾರ್ಯಕ್ರಮ.**
- **ಇಂದು, ಅಂತಾರಾಷ್ಟ್ರೀಯ ಕಾಫಿ, ದಿನಾಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**ಪದೇ ಪದೇ ಪ್ರವಾಹಕ್ಕೆ ತುತ್ತಾಗುವ, ಹಾಗೂ ಪುನರ್ವಸತಿ ಕಲ್ಪಿಸಲುಸಾಧ್ಯವಿಲ್ಲದ ಗ್ರಾಮಗಳ ಶಾಶ್ವತ ಸ್ಥಳಾಂತರಕ್ಕೆ, ಯೋಜನೆ ರೂಪಿಸಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ತಿಳಿಸಿದ್ದಾರೆ. ಪ್ರವಾಹ ಬಾಧಿತ, ಕಲ್ಯಾಣ ಕರ್ನಾಟಕದ ಜಿಲ್ಲೆಗಳ, ವೈಮಾನಿಕ ಸಮೀಕ್ಷೆ ನಡೆಸಿ, ಕಲಬುರ್ಗಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ವಿಜಯಪುರ, ಯಾದಗಿರಿ, ಬೀದರ ಹಾಗೂ ಕಲಬುರ್ಗಿ ಜಿಲ್ಲೆಗಳ, ಸಚಿವರು, ಶಾಸಕರು, ಹಿರಿಯ ಅಧಿಕಾರಿಗಳೊಂದಿಗೆ ಅವರು, ಸಭೆ ನಡೆಸಿದರು. ಪ್ರವಾಹ ಪೀಡಿತ ಜಿಲ್ಲೆಗಳ, ಜಿಲ್ಲಾಧಿಕಾರಿಗಳ ಮೂಲಕ, ಮಧ್ಯಂತರ ಅವಧಿಗೆ, 'ಪ್ರಕೃತಿ ವಿಕೋಪದಿಂದ ಆದ ಹಾನಿ' ಎಂದು, ಅಧಿಸೂಚನೆ ಹೊರಡಿಸಲಾಗುವುದು. ಸಮರ್ಪಕ ಹಾಗೂ ವೈಜ್ಞಾನಿಕ ಸಮೀಕ್ಷೆ ಕಾಲಮಿತಿಯಲ್ಲಿ ಕೈಗೊಳ್ಳಲಾಗುವುದು ಎಂದರು. 10 ಲಕ್ಷ ಹೆಕ್ಟರ್ ಪ್ರದೇಶದಲ್ಲಿ, ಬೆಳೆ ಹಾನಿ ಅಂದಾಜಿಸಲಾಗಿದೆ. ಕಂದಾಯ ಇಲಾಖೆಯಿಂದ ಸಾವಿರ ಕೋಟಿ ರೂಪಾಯಿ ಪರಿಹಾರ ನೀಡಬೇಕಾಗಬಹುದು ಎಂಬ ಅಂದಾಜಿನಲ್ಲಿ, ಸಿದ್ಧತೆ ಮಾಡಿಕೊಂಡಿದ್ದಾಗಿ, ಮುಖ್ಯಮಂತ್ರಿ ಹೇಳಿದರು.**

<><><>

ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತು, ಇಂದಿನಿಂದ 9ನೇ ತಾರೀಖಿನ ವರೆಗೆ, 'ನಾನೂ ವಿಜ್ಞಾನಿ' ಎಂಬ, ಟೆಲಿಸ್ಕೋಪ್ ರಚನಾ ಶಿಬಿರ ಆಯೋಜಿಸಿದೆ ಎಂದು, ಪರಿಷತ್ತಿನ ಅಧ್ಯಕ್ಷ ಹುಲಿಕಲ್ ನಟರಾಜ್ ತಿಳಿಸಿದ್ದಾರೆ. ದೊಡ್ಡಬಳ್ಳಾಪುರದ, ಬೆಸೆಂಟ್ ಪಾರ್ಕ್‌ನ, ಸ್ಕೌಟ್ಸ್ ಕ್ಯಾಂಪ್‌ನಲ್ಲಿ ಆಯೋಜಿತ, ಈ ಶಿಬಿರದಲ್ಲಿ, ರಾಜ್ಯದ 31 ಜಿಲ್ಲೆಗಳಿಂದ ಆಯ್ದ, 152 ವಿದ್ಯಾರ್ಥಿಗಳು, 60 ಜನ ಶಿಕ್ಷಕರು ಹಾಗೂ 10ಕ್ಕೂ ಹೆಚ್ಚು ತಜ್ಞ ವಿಜ್ಞಾನಿಗಳು ಭಾಗವಹಿಸಲಿದ್ದಾರೆ, ಎಂದರು.

<><><>

ಇಂದು ಬೆಳಗ್ಗೆ 10.30ಕ್ಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್.ಬೋಸರಾಜು, ಟೆಲಿಸ್ಕೋಪ್ ತರಬೇತಿ ಶಿಬಿರಕ್ಕೆ ಚಾಲನೆ ನೀಡಲಿದ್ದಾರೆ.

<><><>

ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್, ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಹಾಗೂ ಏಷ್ಯಾ ಬುಕ್ ಆಫ್ ರೆಕಾರ್ಡ್ಸ್ ಸಂಸ್ಥೆಗಳ ಪ್ರತಿನಿಧಿಗಳು, ಶಿಬಿರವನ್ನು ವಿಶ್ವದಾಖಲೆಗಾಗಿ ಪರಿವೀಕ್ಷಿಸಲಿದ್ದಾರೆ.

<><><>

ರಾಷ್ಟ್ರೀಯ ಸ್ವಯಂಸೇವಕ ಸಂಘದ, ಸಂಸ್ಥಾಪನೆಯ, ಶತಮಾನೋತ್ಸವದ ಹಿನ್ನೆಲೆ, ರಾಜ್ಯದ ವಿವಿಧೆಡೆ ವಿಶೇಷ ಕಾರ್ಯಕ್ರಮಗಳು ಆಯೋಜಿತವಾಗಿವೆ. ಡಾಕ್ಟರ್ ಕೇಶವ ಬಲಿರಾಮ್ ಹೆಡ್ಗೇವಾರ ಅವರು, 1925ರ ವಿಜಯ ದಶಮಿಯಂದು, ನಾಗ್ಪುರದಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಸ್ಥಾಪಿಸಿದರು. ವಿಜಯ ದಶಮಿಯ ಆಕರ್ಷಕ ಪಥ ಸಂಚಲನಕ್ಕಾಗಿ, ಸಂಘದ ಸ್ವಯಂಸೇವಕರು, ವಿಶೇಷ ಸಿದ್ಧತೆ ಕೈಗೊಂಡಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ಬೆಳಗ್ಗೆ 10:30ಕ್ಕೆ ಹೊಸ ದಿಲ್ಲಿಯ, ಅಂಬೇಡ್ಕರ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಆಯೋಜಿತ, ರಾಷ್ಟ್ರೀಯ ಸ್ವಯಂಸೇವಕ ಸಂಘದ, ಶತಮಾನೋತ್ಸವ ಸಮಾರಂಭದಲ್ಲಿ, ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ವಿಶೇ ’ ನಾಣ್ಯ ಮತ್ತು ಅಂಚೆ ಚೀಟಿ ಬಿಡುಗಡೆ ಮಾಡಲಿದ್ದಾರೆ.

<><><>

ಆಕಾಶವಾಣಿಯ, ಬಹುಶ್ರುತ, 126ನೇ ಸಂಚಿಕೆಯ, ಮನ್ ಕಿ ಬಾತ್‌ನಲ್ಲಿ, ಪ್ರಧಾನಮಂತ್ರಿಯವರು, ಆರ್.ಎಸ್.ಎಸ್. ಕೊಡುಗೆಯನ್ನು ಸ್ಮರಿಸಿದ್ದು, ಹೀಗೆ..

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 45 ಸೆಕೆಂದುಗಳು

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_Kannada** ಹಾಗೂ

ನಮ್ಮ ಫೇಸ್ಬುಕ್ ಖಾತೆ **Akashvani RNU Bengaluru-Dharwad** ಅನುಸರಿಸಿ.

<><><>

ಸೇವೆ ಮತ್ತು ಸುಶಾಸನ ಧ್ಯೇಯದೊಂದಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಸೇವಾ ಪರ್ವದ ಮೂಲಕ, ಪರಿವರ್ತನೆ ಹಾಗೂ ಪ್ರಗತಿಯನ್ನು, ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದಿಂದ ಸಾಧಿಸಲು, ಶ್ರಮಿಸುತ್ತಿದೆ.

<><><>

'ವಸುಧೈವ ಕುಟುಂಬಕಂ' ಧ್ಯೇಯದೊಂದಿಗೆ, ಕಳೆದ 2023ರಲ್ಲಿ ಭಾರತ, ಜಿ 20 ಅಧ್ಯಕ್ಷತೆ, ವಹಿಸಿತು. ಆಫ್ರಿಕನ್ ಒಕ್ಕೂಟದ ಸದಸ್ಯತ್ವ ಮತ್ತು ಜಾಗತಿಕ ಜೈವಿಕ ಇಂಧನ ಒಕ್ಕೂಟದ ಪ್ರಾರಂಭ ಸೇರಿದಂತೆ, ಹೊಸದಿಲ್ಲಿ ಘೋ 'ಣೆ, ಪರಸ್ಪರ ಸಹಯೋಗಕ್ಕೆ, ನವೀಕೃತ ಮನೋಭಾವವನ್ನು ಸಾಕಾರಗೊಳಿಸಿತು. ನೀತಿ ಸುಸಂಬದ್ಧತೆ, ವಿಶ್ವಾಸಾರ್ಹ ವ್ಯಾಪಾರ ಮತ್ತು ಮಹತ್ವಾಕಾಂಕ್ಷೆಯ ಹವಾಮಾನ ಬದಲಾವಣೆಗಳ ಕ್ರಮದ ಮೇಲೆ ಕೇಂದ್ರೀಕರಿಸಿತು. ಒಮ್ಮತದಿಂದ ಎಲ್ಲ 20 ಸದಸ್ಯ ರಾಷ್ಟ್ರಗಳು ಸಹಿ ಹಾಕಿದ್ದು, ಗಮನಾರ್ಹ.

<><><>

ಜಾಗತಿಕ ಜನಸಂಖ್ಯೆಯ ಶೇಕಡ 80ರಷ್ಟನ್ನು ಒಳಗೊಳ್ಳಲು, ಭಾರತದ ಅಧ್ಯಕ್ಷತೆ, ಸಾಮೂಹಿಕ ಹಿತಾಸಕ್ತಿಯನ್ನು ಪ್ರತಿನಿಧಿಸಲು ವೇದಿಕೆ ಕಲ್ಪಿಸಿ, ಸಣ್ಣ ರಾಷ್ಟ್ರಗಳ ಧ್ವನಿಯಾಯಿತು ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 35 ಸೆಕೆಂದುಗಳು

<><><>

ಇಂದು, ಅಂತಾರಾಷ್ಟ್ರೀಯ ಕಾಫಿ, ದಿನ. 'ಎಂದಿಗಿಂತಲೂ ಹೆಚ್ಚು, ಸಹಯೋಗವನ್ನು ನೀಡಿ, ಸಾಮೂಹಿಕ ಬಲವರ್ಧಿಸೋಣ' ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ. ಚಿಕ್ಕಮಗಳೂರು ಕಾಫಿ ಬೆಳೆಗಾರರ ಸಂಘದ ವತಿಯಿಂದ, 'ವಾಕ್ ವಿತ್ ಕಾಫಿ' ಎಂಬ, ವಿಶಿಷ್ಟ ಕಾರ್ಯಕ್ರಮ ಆಯೋಜಿತವಾಗಿದೆ ಎಂದು, ಸಂಘದ ಅಧ್ಯಕ್ಷ ರತೀಶ ಕುಮಾರ ತಿಳಿಸಿದ್ದಾರೆ. ಚಿಕ್ಕಮಗಳೂರು ತಾಲೂಕು ಕಚೇರಿಯಿಂದ, ಆಝಾದ್ ಉದ್ಯಾನದ ವರೆಗೆ, 700ಕ್ಕೂ ಹೆಚ್ಚು ಜನ, ವಾಕ್ ವಿತ್ ಕಾಫಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, 20 ಕಾರ್ಮಿಕರನ್ನು ಸನ್ಮಾನಿಸಲಾಗುವುದು, ಎಂದರು.

<><><>

ಶಾರದೀಯ ನವರಾತ್ರಿಯ, ಒಂಬತ್ತನೇ ದಿನವಾದ ಇಂದು, ಮಾತೆ ಸಿದ್ಧಿಧಾತ್ರಿ ಆರಾಧನೆ. ಧಾರ್ಮಿಕ ಶಕ್ತಿಯನ್ನು ದಯಪಾಲಿಸಲಿ ಎಂದು, ನಾಡಿನಾದ್ಯಂತ ದೇವಿ ಮಂದಿರಗಳಲ್ಲಿ, ವಿಶೇಷ ಪೂಜೆ, ಶ್ರದ್ಧಾ–ಭಕ್ತಿಯಿಂದ ಈ ಬೆಳಗ್ಗೆ ಸಲ್ಲಿಸಲಾಗುತ್ತಿದೆ.

<><><>

ಮೈಸೂರಿನ ಅಂಬಾವಿಲಾಸ ಅರಮನೆಯಲ್ಲಿ, ಇಂದು ಬೆಳಗ್ಗೆ ಸಾಂಪ್ರದಾಯಿಕ ಆಯುಧ ಪೂಜೆಗೆ, ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ.

<><><>

ಇಂದು, ಆಯುಧ ಪೂಜೆ, ನಾಳೆ ವಿಜಯದಶಮಿಯ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿಯ ಹಿರಿಯ ಜಾನಪದ ವಿದ್ವಾಂಸ, ರಾಮಣ್ಣ ಮೂಲಗಿ.

<><><>

ಡಾ. ರಾಮಣ್ಣ ಮೂಲಗಿ ಧ್ವನಿ 40 ಸೆಕೆಂದುಗಳು

<><><>

ಕ್ಯೂಬಾ, ಈಜಿಪ್ಟ್, ಇಥಿಯೋಪಿಯಾ, ಘಾನಾ, ಫಿಲಿಪೈನ್ಸ್, ತಾಂಜಾನಿಯಾ, ಥೈಲ್ಯಾಂಡ್ ಮತ್ತು ಉಗಾಂಡಾ ಸೇರಿದಂತೆ, ಒಟ್ಟು ಒಂಬತ್ತು ದೇಶಗಳಿಂದ, 30 ರೇ ್ಮೆ ಕೃಷಿ ತರಬೇತುದಾರರು, ಮಂಡ್ಯ ಜಿಲ್ಲೆ, ಮದ್ದೂರು ಮತ್ತು ಮಳವಳ್ಳಿಯ, ಪ್ರಗತಿಪರ ರೇ ್ಮೆ ಕೃಷಿಕರ ಮನೆಗಳಿಗೆ ಭೇಟಿ ನೀಡಿ, ರೈತರಿಂದ ಮಾಹಿತಿ ಪಡೆದರು. ಕೇಂದ್ರ ರೇ ್ಮೆ ಮಂಡಳಿಯ, ಸಂಶೋಧನಾ ವಿಸ್ತರಣಾ ಕೇಂದ್ರದ, ಮದ್ದೂರು ಉಪ ಘಟಕದ ವಿಜ್ಞಾನಿ ಶಿವಕುಮಾರ, ಕೇಂದ್ರದ ವಿಸ್ತರಣಾ ಚಟುವಟಿಕೆಗಳ ಬಗ್ಗೆ ವಿವರಿಸಿದರು. ಮೈಸೂರಿನ ರೇ ್ಮೆ ಕೃಷಿ ಸಂಶೋಧನಾ ಸಂಸ್ಥೆ, ರೇ ್ಮೆ ಕೃಷಿಯನ್ನು ಕೈಗೊಳ್ಳ ಬಯಸುವ, ದೇಶಗಳಿಗೆ ಗುಣಮಟ್ಟದ ತರಬೇತಿ ಕೇಂದ್ರವಾಗಿದೆ.

<><><>

ಶಿವಮೊಗ್ಗ ರೋಲರ್ ಸ್ಕೇಟಿಂಗ್ ಅಸೋಸಿಯೇ ’ನ್‌ನಲ್ಲಿ, ತರಬೇತಿ ಪಡೆದ, 22 ಯುವ ಸ್ಕೇಟರ್‌ಗಳು, ರಾಜ್ಯ ಮಟ್ಟದ ಸ್ಕೇಟಿಂಗ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ ಕರ್ನಾಟಕ ಸ್ಕೇಟಿಂಗ್ ಅಸೋಸಿಯೇ ’ನ್ ಸಹ ಕಾರ್ಯದರ್ಶಿ ಎಂ. ರವಿ, ಮಾಹಿತಿ ನೀಡಿ, ಶಿವಮೊಗ್ಗ ಗೋಪಾಳದ, ಕ್ರೀಡಾ ಸಂಕೀರ್ಣದ ಸ್ಕೇಟಿಂಗ್ ಕ್ರೀಡಾಂಗಣದಲ್ಲಿ, ನಡೆದ ಆಯ್ಕೆ ಪಂದ್ಯಗಳಲ್ಲಿ, 40 ಮಕ್ಕಳು ಭಾಗವಹಿಸಿದ್ದರು, ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಪದೇ ಪದೇ ಪ್ರವಾಹಕ್ಕೀಡಾಗುವ ಗ್ರಾಮಸ್ಥರ ಸ್ಥಳಾಂತರ ಹಾಗೂ ಪುನರ್ವಸತಿಗೆ, ರಾಜ್ಯ ಸರ್ಕಾರದಿಂದ, ಶಾಶ್ವತ ಯೋಜನೆ.
- ದೊಡ್ಡಬಳ್ಳಾಪುರದಲ್ಲಿ, ‘ನಾನೂ ವಿಜ್ಞಾನಿ’ ಟೆಲಿಸ್ಕೋಪ್ ರಚನಾ ಕಮ್ಮಟ, ಇಂದಿನಿಂದ ಆರಂಭ.
- ಆರ್.ಎಸ್.ಎಸ್. ಶತಮಾನೋತ್ಸವ; ರಾಜ್ಯದ ವಿವಿಧೆಡೆ ವಿಶೇಷ ಕಾರ್ಯಕ್ರಮ.
- ಇಂದು, ಅಂತಾರಾಷ್ಟ್ರೀಯ ಕಾಫಿ, ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.